# ಮೊದಲನೇ ತಲೆಮಾರಿನ ಸವಾಲುಗಳು: ಕರೋನಾ ಹಿನ್ನೆಲೆಯಲ್ಲಿ

**ನರಸಿಂಹಪ್ಪ ಜೆ.**

ಸಂಶೋಧನಾ ವಿದ್ಯಾರ್ಥಿ, ಕನ್ನಡ ಅಧ್ಯಯನ ಕೇಂದ್ರ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

DOI: https://doi.org/10.5281/zenodo.15124196

## ABSTRACT:

ಸಾಮಾಜಿಕ ನ್ಯಾಯದ ಪರಿಕಲ್ಪನೆಯ ಪ್ರಮುಖ ಆಶಯವೇ ಅಸಮಾನತೆ ನಿವಾರಿಸಿ ಎಲ್ಲರಿಗೂ ಸಾಮಾಜಿಕ ಆರ್ಥಿಕ ರಾಜಕೀಯ ಪ್ರಕ್ರಿಯೆಗಳಲ್ಲಿ ಸಮಾನ ಅವಕಾಶ ಒದಗಿಸುವುದು. ಹೀಗಾಗಿ ಕರೋನಾ ತಂದ ಬಿಕ್ಕಟ್ಟುಗಳನ್ನು ವಿವಿದ ಆಯಾಮಗಳನ್ನು ಸಾಮಾಜಿಕ ನ್ಯಾಯ ಪರಿಕಲ್ಪನೆಯಲ್ಲಿ ಚರ್ಚಿಸುವ ಅಗತ್ಯವಿದೆ. ಕರೋನಾ ಸನ್ನಿವೇಶದಲ್ಲಿ ಶ್ರೀಸಾಮಾನ್ಯರ ಹಕ್ಕುಗಳನ್ನು ಮರೆಮಾಚಲಾಗುತ್ತಿದೆ. ಈ ಸಾಂಕ್ರಾಮಿಕವು ಹರಡುವಲ್ಲಿ ಯಾವುದೇ ಆರ್ಥಿಕ ತಾರತಮ್ಯ ಮಾಡುತ್ತಿಲ್ಲ ಆದರೆ, ಇದರಿಂದ ಮುಕ್ತಿ ಪಡೆಯಲು ದೊರೆಯುವ ಆರೋಗ್ಯ ಸೌಲಭ್ಯಗಳು ಶ್ರೇಣಿಕೃತವಾಗಿವೆ. ಈ ಮೂಲಕ ಸಮ ಸಮಾಜವನ್ನು ನಿರ್ಮಾಣ ಮಾಡಲು ಬೇಕಾಗುವ ಪರಿಭಾಷೆಗಳ ಮುಖಾಂತರ ಅರ್ಥೈಸಿಕೊಳ್ಳುವ ಜರೂರು ಇದೆ. ಕೇಂದ್ರದಿಂದ ಅಂಚೆಗೆ ತಳ್ಳಲ್ಪಟ್ಟ ಶೋಷಿತ ಸಮುದಾಯಗಳ ಸವಾಲುಗಳನ್ನು ಮರು ಚಿಂತನೆಗೆ ಒಳಪಡಿಸಲಾಗಿದೆ.

## KEYWORDS:

ಸಬಾಲ್ಟ್ರನ್, ಕರೋನಾ, ಮೊದಲನೇ ತಲೆಮಾರು, ಆರೋಗ್ಯ ಪ್ರಜ್ಞೆ, ಸಾಮಾಜಿಕ ನ್ಯಾಯ, ಸಾಮಾನ್ಯೀಕರಣ, ಸಾಂಕ್ರಾಮಿಕ ಜಾಡ್ಯ.

ಆಧುನಿಕರಣ, ಜಾಗತೀಕರಣ, ವಸಾಹತೀಕರಣಗಳು ನಮ್ಮ ದನಿಯನ್ನು ಸಾಮಾನ್ಯೀಕರಿಸಲಾಗುತ್ತಿದೆ. ಇವುಗಳು ನಮ್ಮ ಜಾಗೃತ ಪ್ರಜ್ಞೆಯನ್ನು ಅಡಗಿಸುತ್ತಿವೆ. ಆದ ಕಾರಣ ನಾವು ನಮಗೆ ಅರಿವಿಲ್ಲದೆ ಗುಲಾಮಗಿರಿಗೆ ಅಥವಾ ಇನ್ನೊಬ್ಬರ ಅಧಿನಕ್ಕೆ ಒಳಪಡುತ್ತಿದ್ದೇವೆ. ಆದ್ದರಿಂದ ನನ್ನ ಅಸ್ತಿತ್ವವನ್ನು ಇವುಗಳಿಂದ ಬಿಡಿಸಿಕೊಳ್ಳುವ ಜರೂರು ಇದೆ. ಹಾಗಾದರೆ ನನಗೆ ಬೇಕಾದ ಆಧುನಿಕರಣ, ವಸಾಹತೀಕರಣ, ಜಾಗತೀಕರಣ ಯಾವುದು. ನನ್ನ ಬದುಕು ಕಟ್ಟಿಕೊಳ್ಳಲು ಬೇಕಾಗಿರುವ ಸಾಧನವಾದರೂ ಯಾವುದು. ಎಂಬುದನ್ನು ಪ್ರಶ್ನೆ ಹಾಕಿಕೊಂಡು ಮುನ್ನಡೆಯಲಾಗುತ್ತಿದೆ. ದುಡಿಯುವ ವರ್ಗದ ಬಗ್ಗೆ ಗೌರವ ಇಲ್ಲದ ಸಮಾಜದಲ್ಲಿದ್ದೇವೆ. ಇವರ ಉನ್ನತಿಗಾಗಿ ವೇದಿಕೆಗಳಲ್ಲಿ ಮಾತಾಡಿದ ಆಳುವ ವರ್ಗಗಳು ಸಮಾಜದಲ್ಲಿ ದಬ್ಬಾಳಿಕೆ ನಡೆಸುತ್ತಿವೆ. ಬಲಪಂಥೀಯ ಮಾಧ್ಯಮಗಳು ಅವರ ಅನ್ನಕ್ಕೆ ಕತ್ತರಿ ಹಾಕುತ್ತಿರುವುದು ಇತ್ತೀಚಿನ ರೈತ ಹೋರಾಟಗಳ ಮುಖಾಂತರ ನಾವು ತಿಳಿಯಬಹುದಾಗಿದೆ. ಇದನ್ನು ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಆಧುನಿಕ ಗುಲಾಮಗಿರಿ ಎಂದೇ ಅರ್ಥೈಸಿಕೊಳ್ಳಬಹುದಾಗಿದೆ. ಈ

ಸವಾಲುಗಳನ್ನು ಬಿಡಿಸಿಕೊಳ್ಳಲಾಗದ ರೈತರು ತಮ್ಮ ಮಕ್ಕಳ ಮೇಲೆ ಶಿಕ್ಷಣದ ಮುಖಾಂತರ ನಂಬಿಕೆಯನ್ನು ಬೆಟ್ಟದಷ್ಟು ಇಟ್ಟಿದ್ದಾರೆ. ಆದರೆ ಮೊದಲನೇ ತಲೆಮಾರಿನವರಾದ ನಾವು ಶಿಕ್ಷಣ ಪಡೆಯುವಲ್ಲಿ ಎಲ್ಲಾದರೂ ಎಡವಿದ್ದೀವಾ ಎಂಬ ಸಂಶಯ ಭಾವ ನನ್ನಲ್ಲಿ ಮೂಡಿದೆ.

ಉನ್ನತ ವಿದ್ಯಾಭ್ಯಾಸಕ್ಕಾಗಿ ನಗರಕ್ಕೆ ಪ್ರತಿಯೊಬ್ಬ ವಿದ್ಯಾರ್ಥಿ ಬರುತ್ತಾನೆ. ಇವನು ಎಲ್ಲಾ ಕನಸುಗಳನ್ನು ಕಟ್ಟಿಕೊಂಡು ಬರುತ್ತಾನೆ. ಇವನು ಎಲ್ಲಾ ಕನಸುಗಳನ್ನು ಕಟ್ಟಿಕೊಂಡು ಜೀವನವನ್ನು ಸೆಕ್ಯೂರ್ ಮಾಡುವುದಕ್ಕೆ ಬಯಸುತ್ತಾನೆ. ಆದರೆ ಪಟ್ಟ ಭದ್ರ ಹಿತಾಸಕ್ತಿಗಳು ಶಿಕ್ಷಣ ವ್ಯವಸ್ಥೆಯನ್ನು ಕಲುಷಿತಗೊಳಿಸುವ ಹುನ್ನಾರ ಮಾಡಲಾಗುತ್ತಿದೆ. ಇವುಗಳಿಂದ ವಿಚಾರವಂತರು, ಪ್ರಜ್ಞಾವಂತ ಸಮುದಾಯಗಳು ಎಚ್ಚೆತ್ತುಕೊಳ್ಳಬೇಕಿದೆ. ಪ್ರತಿಯೊಬ್ಬರು ಪ್ರಶ್ನಿಸುವ ಎದೆಗಾರಿಕೆ ಬೆಳೆಸಿಕೊಳ್ಳುವ ಅಗತ್ಯವಿದೆ. ಪ್ರಮುಖವಾಗಿ ತಳ ಸಮುದಾಯಗಳು ಪ್ರಜ್ಞಾವಂತರಾಗಬೇಕಿದೆ. ಕೇಂದ್ರದಿಂದ ಅಂಚಿಗೆ ನೂಕಲ್ಪಟ್ಟ ಸಮುದಾಯಗಳ ಬಗ್ಗೆ ಹೆಚ್ಚು ಕಾಳಜಿ ಹಾಗೂ ಸಂಶೋಧನೆಗಳು ನಡೆಯಬೇಕಿದೆ. ದಲಿತ ಸಬಾಲ್ಟ್ರನ್ ಮುಖ್ಯವಾಗಿ ತಳ ಸಮುದಾಯಗಳ ಕುರಿತಾಗಿ ನಾಲ್ಕು ಪರಿಕಲ್ಪನೆಗಳ ಮೇಲೆ ನಿಂತಿದೆ. ಅಸ್ಥಿತ್ವ, ಗುರುತ್ವ, ಪ್ರಜ್ಞೆ, ಆಸ್ಮಿತೆ ಪ್ರತಿನಿಧಿಕರಣ ಇವುಗಳಿಂದ ಬಿಡುಗಡೆಗೊಳಲು ನಾವು ಮೆಚ್ಚಿಕೊಂಡಿರುವ ಜ್ಞಾನ, ರಾಜಕಾರಣ, ಸಾಹಿತಿ ಚಳುವಳಿ ಹೇಗೆ ನಮಗೆ ಸಹಾಯವಾಗಬಹುದು ಪರಿಶೀಲಿಸಿಕೊಳ್ಳಬೇಕಿದೆ. "ಆಂತೋನಿಯೋ ಗ್ರಾಮ್ಷಿ ಬರಹಗಳ ಸಂಕಲನವಾದ ಸೆಲೆಕ್ಷನ್ ಫ್ರಮ್ ಪ್ರಿಸನ್ ನೋಟ್ ಬುಕ್ ನಲ್ಲಿ ಸಬಾಲ್ಟ್ರನ್ ಎಂದರೆ ಸೇನೆಯ ಕ್ಯಾಪ್ಟನ್ಗಿಂತ ಕೆಳಹಂತದಲ್ಲಿರುವ ಅವನು/ಅವಳು"ಎಂದಿದ್ದಾರೆ. ನಮ್ಮ ಬದುಕಿಗೆ ಸಂಬಂಧಿಸಿದ ಯಾವುದೇ ತೀರ್ಮಾನವನ್ನು ಕೈಗೊಳ್ಳುವ ಸಾಮಾಜಿಕ ಸ್ವಾಯುತ್ತದೆ ಇರುವುದಿಲ್ಲ. ಇವರು ಅವಕಾಶ ವಂಚಿತರಾಗಿರುತ್ತಾರೆ. ಮುಖ್ಯವಾಗಿ ಪ್ರಭುತ್ವದ ಅಡಿಯಾಗಿ ಇರುತ್ತಾರೆ ಹೊರತು ಪ್ರಭುತ್ವದ ಭಾಗವಾಗಿರುವುದಿಲ್ಲ. ಇವರು ಪ್ರಭುತ್ವದ ನಿಯಂತ್ರಣ ಮತ್ತು ಪ್ರಾಬಲ್ಯಕ್ಕೆ ಒಳಗಾಗಿರುತ್ತಾರೆ.

ಸಬಾಲ್ಟ್ರನ್ ಓದುಗರ ತಿಳಿವಿನಲ್ಲಿ ರೈತ ಹಾಗೂ ಕಾರ್ಮಿಕರ ನೆಲೆಯಿಂದ ಚರಿತ್ರೆಯನ್ನು ನೋಡುವ ಕಣ್ಣೋಟದಿಂದ ಕೂಡಲೇ ಎಚ್ಚೆತ್ತುಕೊಂಡು ವಸಾಹತುಶಾಹಿ, ರಾಷ್ಟ್ರೀಯ ಚಳುವಳಿಗಳು, ಮೇಲ್ವರ್ಗದ ಸಂಕಥನಗಳನ್ನು ಪ್ರತಿನಿಧಿಸುವ ಕಡೆ ಇವರು ಹೊರಳಿಕೊಂಡರು. ಪ್ರಜ್ಞೆ ಎಂಬುದು ಮೂಲತಃ ಒಳಗಿನ ಕ್ರಿಯೆಯೇ ಅಥವಾ ಹೊರಗಿನ ಕ್ರಿಯೆಯೇ ಎಂಬುದನ್ನು ಪ್ರಶ್ನೆ ಹಾಕಿಕೊಳ್ಳಬೇಕಿದೆ. ಪ್ರತಿಯೊಂದು ಉಪಸಂಸ್ಕೃತಿಯ ಮೇನ್ ಸ್ಟ್ರೀಮ್ ಸಮುದಾಯಗಳಿಂದ ಪ್ರಚೋದಗೊಂಡ ಸಂಸ್ಕೃತಿಗಳಾಗಿವೆ. ಕನ್ನಡ ಸಂಸ್ಕೃತಿ ಚಿಂತನೆ ಸಾಮಾಜಿಕವಾಗಿ ಉಚ್ಚ ಜಾತಿಯ ಚಿಂತಕರಿಂದ ಶುರುವಾಗಿದೆ. ನಂತರದ ಸನ್ನಿವೇಶದಲ್ಲಿ ಕೆಲಸ್ತರದಿಂದ ಚಿಂತಕರು ಪ್ರವೇಶ ಮಾಡುತ್ತಾ ಬಂದಿದ್ದಾರೆ. ಈ ಹಿನ್ನಲೆಯಲ್ಲಿ ಸಬಾಲ್ಟನ್ ಚರ್ಚೆಯ

ಅತ್ಯವೇನು? ಇವುಗಳ ಸ್ವರೂಪ ಹೇಗಿರಬೇಕು? ನಾವು ಅನುಸರಿಸಬೇಕಾದ ಮಾನದಂಡಗಳಾವವು? ಎಂಬಿತ್ಯಾದಿ ಪ್ರಶ್ನೆಗಳು ನಮಗಿಲ್ಲಿ ಎದುರಾಗುತ್ತವೆ. ಇವುಗಳಿಗೆ ಒಂದು ರೀತಿಯಲ್ಲಿ ಉತ್ತರಿಸಬಹುದು, ಇದೇನು ದೊಡ್ಡ ಸಂಗತಿಯಲ್ಲ. ಆದರೆ ಇವತ್ತು ಕರ್ನಾಟಕದಲ್ಲಿ ಜ್ಞಾನಶಿಸ್ತುಗಳ ಬೆಳವಣಿಗೆ ಮತ್ತು ಸ್ವರೂಪ ಹೇಗಿದೆ ಎಂಬುದನ್ನು ಯೋಚಿಸುವ ನಿಟ್ಟಿನಲ್ಲಿ ಈ ಪ್ರಶ್ನೆಗಳನ್ನು ಮುಂದಿಟ್ಟುಕೊಂಡು ನೋಡಿದರೆ ಮಾತ್ರ ಈ ಪ್ರಶ್ನೆಗಳ ಮಹತ್ವ ನಮಗಿಲ್ಲಿ ನಿಚ್ಚಳವಾಗುತ್ತದೆ. ಪ್ರಶ್ನೆಗಳು ತಾವಾಗಿಯೇ ತಲೆಯೆತ್ತದಿದ್ದರೂ, ಕೆಲವು ಸಲ ಅವುಗಳನ್ನು ನಾವಾಗಿಯೇ ಮೈಮೇಲೆ ಎಳೆದುಕೊಳ್ಳುವ ಜರೂರಿರುತ್ತದೆ. ಅಂತಹದೊಂದು ಜರೂರು ನಮಗೀಗ ಇದೆ ಎಂಬುದನ್ನು ನಾವ್ಯಾರು ಕೂಡ ಮರೆಯುವಂತಿಲ್ಲ. ಹಾಗಾಗಿ ಈ ಪ್ರಶ್ನೆಗಳಿಗೆ ನೇರವಾಗಿ ಉತ್ತರಿಸುವುದಕ್ಕಿಂತ, ಈ ಪ್ರಶ್ನೆಗಳನ್ನು ನಾವು ಯಾಕೆ ಇವತ್ತು ಕೇಳಿಕೊಳ್ಳಬೇಕು ಎನ್ನುವುದನ್ನು ಚರಿಸುವುದರ ಕಡೆಗೆ ಗಮನವನ್ನು ಹರಿಸೋಣ. ಕರ್ನಾಟಕದಲ್ಲಿ ಸಮಾಜ, ಸಂಸ್ಕೃತಿ, ರಾಜಕಾರಣ, ಆತ್ಮಕತೆ ಹಾಗೂ ಸಾಹಿತ್ಯ ಮೀಮಾಂಸೆಯ ಬಗೆಗಿನ ತಕರಾರುಗಳು ಇವತ್ತು ನಿನ್ನೆಯದಲ್ಲ. ಇವುಗಳಿಗೆ ಶತಮಾನಗಳ ಪರಂಪರೆ ಇದೆ. ಆದಾಗ್ಯೂ ಅವುಗಳನ್ನು ಪಕ್ಕಕ್ಕೆ ತಳ್ಳಿ ಮುಂದೆ ಸಾಗುತ್ತಿದ್ದೇವೆ. ಅಂದರೆ, ಇದುವರೆಗೂ ಇಂತಹ ಸವಾಲುಗಳನ್ನು ಕರ್ನಾಟಕದ ಸನ್ನಿವೇಶದಲ್ಲಿ ಯಾರೂ ಎದುರಿಸಲ್ಲವೇ ಎಂದು ಕೇಳಬಹುದು. ಖಂಡಿತವಾಗಿಯೂ ಈ ಸವಾಲುಗಳನ್ನು ನಿಭಾಯಿಸುವ ಮತ್ತು ಬಗೆಹರಿಸುವ ಪ್ರಯತ್ನಗಳನ್ನು ಸಾಕಷ್ಟು ತಿಳಿವಿಗರು ಈಗಾಗಲೇ ಮಾಡಿರುತ್ತಾರೆ. ಆದರೆ ಇವರೆಲ್ಲರೂ ಒಂದು ನಿರ್ದಿಷ್ಟ ಜ್ಞಾನಶಿಸ್ತಿನ ಚೌಕಟ್ಟಿಗೆ ಮಾತ್ರ ಸೀಮಿತವಾಗಿ ಇಂತಹ ಕೆಲಸಗಳನ್ನು ಕೈಗೊಂಡಿರುತ್ತಾರೆ. ಇವತ್ತು ಕೇವಲ ಆಯಾ ಜ್ಞಾನಶಿಸ್ತಿಗೆ ಮಾತ್ರ ಕಟ್ಟುಬಿದ್ದು ಸಮಾಜ, ಸಂಸ್ಕೃತಿ, ಆತ್ಮಕತೆ ಹಾಗೂ ರಾಜಕಾರಣವನ್ನು ಕುರಿತು ಚರಿಸುವುದು ಅತ್ಯಂತ ಸಂಕುಚಿತ ಮನೋಭಾವ ಆಗುತ್ತದೆ. ಆದ್ದರಿಂದ ಸಮೂಹಗಳ ಇಡೀ ಬದುಕಿನ ಅಸ್ತಿತ್ವ, ಅಸ್ಮಿತೆ, ಪ್ರಜ್ಞೆ ಹಾಗೂ ಪ್ರತಿನಿಧೀಕರಣದ ನೆಲೆಗಳನ್ನು ಜ್ಞಾನಶಿಸ್ತೀಯ ಗಡಿಗರೆಗಳನ್ನು ಮೀರಿ ಬಿಡಿಸಿ ನೋಡುವ ತುತ್ತು ಇದೆ. ಬದುಕಿನ ಯಾವುದೇ ಒಂದು ವಿದ್ಯಮಾನವನ್ನು ಹಲವು ನೆಲೆಗಳಿಂದ ವಿಶ್ಲೇಷಿಸಿ, ಅದರ ಒಟ್ಟು ಸ್ವರೂಪವನ್ನು, ಪರಿಣಾಮವನ್ನು ಹಾಗೂ ಪ್ರಭಾವದ ವಿನ್ಯಾಸಗಳನ್ನು ಕಂಡರಿಸುವ ಅಗತ್ಯವಿದೆ. ಉದಾ. ಗೆ ಜಾತಿ ಬಗೆಗಿನ ಇಲ್ಲವೇ ಅಸ್ಪೃಶ್ಯತೆಯ ಚಹರೆಗಳನ್ನು ಕೇವಲ ಸಮಾಜಶಾಸ್ತ್ರೀಯ ಹಿನ್ನಲೆಯಿಂದ ನೋಡಿದರೆ ಸಾಲದು. ಅದನ್ನು ಸಾಮಾಜಿಕ, ಆರ್ಥಿಕ, ರಾಜಕೀಯ, ಧಾರ್ಮಿಕ ಹಾಗೂ ಚಾರಿತ್ರಿಕ ವಲಯಗಳಲ್ಲಿ ನೆಲೆಗೊಳಿಸಿ ವಿಶ್ಲೇಷಿಸಿದರೆ, ಇದರಿಂದ ಎದುರಾಗುವ ಬಿಕ್ಕಟ್ಟುಗಳನ್ನು ಬಗೆಹರಿಸುವುದಕ್ಕೆ ನಮಗೆ ದಾರಿಗಳು ಗೋಚರಿಸುತ್ತವೆ. ಇಲ್ಲವಾದರೆ, ಆಯಾ ಜ್ಞಾನಶಿಸ್ತುಗಳ ತಾತ್ವಿಕತೆ ಮತ್ತು ವಿಶ್ಲೇಷಣೆಯ ಪರಿಕರಗಳ ಚೌಕಟ್ಟಿಗೆ ಮಾತ್ರ ಒಗ್ಗಿಸಿ ನೋಡುವುದರಿಂದ, ಈ ವಿದ್ಯಮಾನದ ಪರಿಣಾಮದ ನೆಲೆ

ಅತ್ಯಂತ ಸೀಮಿತವಾಗಿರುತ್ತದೆ. ಇಂತಹ ಸೀಮಿತ ಜ್ಞಾನಶಿಸ್ತೀಯ ಚೌಕಟ್ಟುಗಳನ್ನು ಮೀರಿ ನಿಲ್ಲುವುದಕ್ಕೆ ಬೇಕಾಗುವ ಬೌದ್ಧಿಕ ಸಂಪನ್ಮೂಲ ಹಾಗೂ ತಾತ್ವಿಕ ವಿನ್ಯಾಸಗಳನ್ನು ಕಂಡುಕೊಳ್ಳಬೇಕಿದೆ. ಕೇವಲ ಸಬಾಲ್ಟ್ರನ್ ಪರಿಕಲ್ಪನೆಯನ್ನು ಎರವಲು ಪಡೆಯುವುದರ ಮೂಲಕ ಮಾತ್ರ ಇದು ಸಾಧ್ಯವಾಗಲಾರದು. ಬದಲಾಗಿ ಈ ಪರಿಕಲ್ಪನೆಯನ್ನು ಒಂದು ಅಂತರ್ಶಿಸ್ತಿಯ ಗ್ರಹಿಕೆಯನ್ನಾಗಿ ಪರಿಭಾವಿಸಬೇಕಿದೆ ಮತ್ತು ಅನ್ವಯಿಸಬೇಕಾಗಿದೆ.

ಒಂದು ಚಿಂತನೆಯನ್ನು ಅರ್ಥೈಸಿಕೊಳ್ಳಲು ಇರುವ ಮಾನದಂಡವಾದರೂ ಏನು. ತಳ ಸಮುದಾಯಗಳನ್ನು ಕುರಿತಾದ ಅನೇಕ ಸಂಶೋಧನೆಗಳು ಚಿಂತನೆಗಳು ನಡೆದಿದೆ ಆದರೂ ಇದರಿಂದ ಹೊರಬರುವುದಾದರೂ ಹೇಗೆ. ರಾಜಕೀಯ ಚಿಂತಕರು, ಸಮಾಜ ವಿಜ್ಞಾನಿಗಳು, ಸಾಹಿತ್ಯ ವಿಮರ್ಶಕರು, ಸಂಸ್ಕೃತಿ ಚಿಂತಕರು, ಸಾಂಸ್ಕೃತಿಕ ಅಧ್ಯಯನಕಾರರು ಸಮುದಾಯದ ಕುರಿತಾದ ಬರವಣಿಗೆಯನ್ನು ರಚಿಸಿದ್ದಾರೆ. ತಮ್ಮ ತಮ್ಮ ನುಡಿಯ ಮೂಲಕ ದಮನಿತರ ವರ್ಣನೆ ಮಾಡಿದ್ದಾರೆ. ಆದರೂ ಇವರು ಬರೆದಷ್ಟು ಸಮುದಾಯ ಮೇಲಿನ ದೌರ್ಜನ್ಯ ಕಡಿಮೆ ಅಂತೂ ಆಗಲೇ ಇಲ್ಲ. ದೇಶದ ನಾನಾ ಭಾಗಗಳಲ್ಲಿ ದಿನಕ್ಕೆ ಸಾವಿರಾರು ಪ್ರಕರಣಗಳು ದಾಖಲಾಗುತ್ತಲೇ ಇವೆ. ಎಲ್ಲಾ ಪ್ರಕರಣದಲ್ಲೂ ಬಂಡವಾಳ ಶಾಹಿಗಳದ್ದು ಹಾಗೂ ಉಳ್ಳವರದ್ದೇ ಮೇಲುಗೈ. ನಾನು ಕೆಲವು ಬರವಣಿಗೆಗಳನ್ನು ಅವಲೋಕಿಸಿದಾಗ ಅದರಲ್ಲಿ ನನಗೆ ಬೇಗ ಅರ್ಥ ಆಗುವುದು ದಮನಿತರ ಪಾತ್ರಗಳು ಸನ್ನಿವೇಶಗಳು ಹಾಗೂ ಸುತ್ತಮುತ್ತಲಿನ ಸನ್ನಿವೇಶಗಳು. ಕುವೆಂಪು, ಕಾರಂತರ ಕಾದಂಬರಿಗಳಲ್ಲಿ ನಾನು ಹೆಚ್ಚಾಗಿ ಕಾಣಲಾಗುತ್ತದೆ. ಇಲ್ಲಿ ಮುಖ್ಯವಾದ ಪ್ರಶ್ನೆಯೊಂದಿದೆ: ಸಾಮಾಜಿಕ ಬದಲಾವಣೆಯ ಹೊಣೆಗಾರಿಕೆ ಯಾರದ್ದು? ಶೋಷಿತರದ್ದೆ? ಅಥವಾ ಶೋಷಕರದ್ದೇ? ಅಥವಾ ವಿಶ್ವದ ಪ್ರಜೆಯಾಗುವತ್ತ ದಾಪುಗಾಲಿಟ್ಟಿರುವ ನಾಗರಿಕ ಸಮಾಜದ್ದೇ? ಉತ್ತರ ಸುಲಭವಲ್ಲ. ಬುಡಮಟ್ಟದಲ್ಲಿ ದಮನಿತ ಸಮುದಾಯಗಳು ತಮಗಾಗುತ್ತಿರುವ ಅನ್ಯಾಯಗಳನ್ನು ಪ್ರತಿಭಟಿಸುವಾಗ ಪ್ರಜಾಪ್ರಭುತ್ವದ ಮಾದರಿಯಲ್ಲಿ ಸಾಗಬೇಕೆ ಅಥವಾ ಮಿಲಿಟೆಂಟ್ ಮಾದರಿಯಲ್ಲಿ 'ಶಸ್ತ್ರ' ಕೈಗೆತ್ತಿಕೊಳ್ಳಬೇಕೆ? ಯಾವುದೇ ತಂತ್ರಗಾರಿಕೆಯನ್ನು ಎತ್ತಿಕೊಂಡಾಗಲೂ ಮೇಲಿನ ಪ್ರಶ್ನೆಯನ್ನು ಉತ್ತರಿಸಲೇ ಬೇಕಾಗುತ್ತದೆ. ಇಲ್ಲಿ ವಿಮೋಚನೆ ಎನ್ನುವುದು ಕೇವಲ ಬಡಜನರಿಗೆ ಮಾತ್ರ ಅಲ್ಲ. ಶ್ರೀಮಂತರಿಗೂ ವಿಮೋಚನೆ ಬೇಕು. ಆದರೆ ಶ್ರೀಮಂತರ ವರ್ಗ ಎಸಗಿರುವ ಕೌಲ್ಯಗಳಿಗೆ ಶಿಕ್ಷೆಯಾಗಲೇಬೇಕಿದೆ. 'ನಾಗರಿಕ ಸಮಾಜ' ಎರಡೂ ವರ್ಗಗಳನ್ನು ಪ್ರತಿನಿಧಿಸಲು ಸಾಧ್ಯವಿಲ್ಲ. ಹೀಗಿರುವಾಗಲೂ ಈ ಸೂಕ್ಷ್ಮಗಳನ್ನು ಅರಿತು ಪೂರ್ಣಾವಧಿ ಕಾರಕರ್ತರನ್ನು ಮಾದರಿ ಯಾಗಿಟ್ಟುಕೊಳ್ಳುವಾಗಲೇ ಅಲ್ಪಾವದಿಯ ಕಾರಕರ್ತರೂ ಸಹ ಸಾಕಷ್ಟಿದ್ದಾರೆ ಎಂಬುದನ್ನು ಗಮನಿಸಬೇಕಾಗುತ್ತದೆ. ಅವರಿಗೂ ಒಂದು

ವೇದಿಕೆಯ ಅವಶ್ಯಕತೆ ಇದೆ ತಾನೇ?

ಸಾಮಾಜಿಕ ನ್ಯಾಯದ ಪರಿಕಲ್ಪನೆಯ ಪ್ರಮುಖ ಆಶಯವೇ ಅಸಮಾನತೆಯನ್ನು ನಿವಾರಿಸಿ ಎಲ್ಲರಿಗೂ ಸಾಮಾಜಿಕ, ಆರ್ಥಿಕ, ರಾಜಕೀಯ ಪ್ರಕ್ರಿಯೆಗಳಲ್ಲಿ ಸಮಾನ ಅವಕಾಶವನ್ನು ಒದಗಿಸುವುದು. ಹೀಗಾಗಿ ಕರೋನಾ ತಂದಿರುವ ಬಿಕಟ್ಟುಗಳನ್ನು ದುಃಸ್ಥಿತಿಯ ವಿವಿಧ ಆಯಾಮಗಳನ್ನು ಸಾಮಾಜಿಕ ನ್ಯಾಯದ ಪರಿಕಲ್ಪನೆಯಲ್ಲಿ ನಮ್ಮ ರಾಜ್ಯ ವ್ಯವಸ್ಥೆಯನ್ನು ಪುನರ್ ವಿಮರ್ಶೆ ಮಾಡಬೇಕಾಗಿದೆ. ಆ ಮೂಲಕ ಸಮ ಸಮಾಜವನ್ನು ರೂಪಿಸಲು ಬೇಕಾಗುವ ಪರಿಭಾಷೆಗಳ ಮುಖಾಂತರ ಈ ಬಿಕ್ಕಟ್ಟನ್ನು ಅರ್ಥಮಾಡಿಕೊಳ್ಳಲು ಅನ್ವಯಿಸಬೇಕಿದೆ. ಹೀಗಾಗಿ ನಾವು ಎದುರಿಸಿದ ಮತ್ತು ಎದುರಿಸುತ್ತಿರುವ ಸಾಂಕ್ರಾಮಿಕ ಬಿಕ್ಕಟ್ಟು ಸ್ಥಳೀಯ ಮಟ್ಟದಲ್ಲಿ ಯಾವ ರೀತಿ ಪರಿಣಾಮ ಬೀರಿದೆ. ಮೊದಲನೇ ತಲೆಮಾರಿನ ಯುವ ಸಮುದಾಯದ ಎದುರಿಸಿದಂತಹ ಬಿಕ್ಕಟ್ಟುಗಳು ಯಾವುವು? ವಿವಿಧ ಜಾತಿ ಮತ್ತು ವರ್ಗಗಳ ಮೇಲೆ ಉಂಟು ಮಾಡಿರುವ ಪರಿಣಾಮಗಳು ಯಾವುವು? ದುಡಿಯುವ ವರ್ಗದ ಜನರ ಬದುಕಿನ ಮೇಲೆ ಯಾವ ರೀತಿ ಪೆಟ್ಟು ಬಿದ್ದಿದೆ? ಸ್ಲಂ ಹೆಣ್ಣುಮಕ್ಕಳ ಮತ್ತು ಮಹಿಳೆಯರ ಸವಾಲುಗಳು ಯಾವುವು? ವಲಸೆ ಕಾರ್ಮಿಕರ ಮೇಲೆ ಪರಿಣಾಮ ಯಾವ ರೀತಿ ಆಗಿದೆ. ಅದರಲ್ಲಿಯೂ ಸಣ್ಣ ಮತ್ತು ಅತಿ ಸಣ್ಣ ರೈತರು ಭೂ ರಹಿತ ಕೃಷಿ ಕಾರ್ಮಿಕರು, ಅಸಂಘಟಿತ ಕಾರ್ಮಿಕರ ಬದುಕಿನ ಮೇಲೆ ಯಾವ ರೀತಿ ಈ ಬಿಕ್ಕಟ್ಟು ಸೃಷ್ಟಿಸಿದೆ. ಎಂಬುದನ್ನು ಪರಿಶೀಲಿಸುವ ಅಗತ್ಯವಿದೆ.

ಈ ಸಾಂಕ್ರಾಮಿಕ ಜಾಡ್ಯವು ಬರಿ ವ್ಯಕ್ತಿಯ ದೇಹಕ್ಕ ಮಾತ್ರ ಅಂಟಿಲ್ಲ. ನಮ್ಮ ಮನಸ್ಸಿಗೂ ಸಾಂಕ್ರಾಮಿಕ ಜಾಡ್ಯ ಅಂಟಿದೆ. ಮಾನವ ಕುಲಕ್ಕೆ ಎಚ್ಚರಿಕೆಯ ಗಂಟೆಯಾಗಿದೆ. ನವ ಬಂಡವಾಳ ಶಾಹಿ ವ್ಯವಸ್ಥೆಯ ತಾಳಕ್ಕೆ ತಕ್ಕಂತೆ ಹೆಜ್ಜೆ ಹಾಕುತ್ತಿರುವ ಪ್ರಜಾಪ್ರಭುತ್ವ ವ್ಯವಸ್ಥೆ. ಮಾಧ್ಯಮಗಳ ವೈಫಲ್ಯ, ವೈಜ್ಞಾನಿಕ ಮನೋಭಾವದ ಜಾಗದಲ್ಲಿ ತಳವೂರುತ್ತಿರುವ ಅವೈಜ್ಞಾನಿಕತೆ, ಮೂಢನಂಬಿಕೆಗಳು. ಗ್ರಾಮೀಣ ಭಾಗದ ಜನರ ಹಾಗೂ ರೈತರ ಆಸ್ಮಿತೆಗೆ ಎದುರಾದ ಸಮಸ್ಯೆಗಳು. ಏಕಾ ಏಕಿ ಲಾಕ್ಡೌನ್ ನಿಂದ ತತ್ತರಿಸಿದ ವಲಸೆ ಕಾರ್ಮಿಕರು, ಮಹಿಳೆಯರು. ಆನ್ಲೈನ್ ಶಿಕ್ಷಣದ ಮಿತಿಗಳು ಮುಂತಾದವು ಜನರ ತಿಳುವಳಿಕೆಯನ್ನು ಅವರು ಕಟ್ಟಿಕೊಂಡು ಬಂದ ನಂಬಿಕೆಗಳನ್ನು ಪಲ್ಲಟಗೊಳಿಸಿದವು. ಇದರ ಹಿನ್ನೆಲೆಯಲ್ಲಿ ಭಯ, ಬರ, ರೋಗ ಈ ಮೂರು ಪರಿಕಲ್ಪನೆಗಳನ್ನು ಸಾಮಾಜಿಕ ಭಾಷಾ ವಿಜ್ಞಾನದ ಹಿನ್ನೆಲೆಯಲ್ಲಿ ಚರ್ಚಿಸುವ ಜರೂರು ಇದೆ. ಸಮಕಾಲಿನ ಸಮಯದಲ್ಲಿ ನಾವು ಎದುರಿಸುತ್ತಿರುವ ಆರೋಗ್ಯ ವ್ಯವಸ್ಥೆಯಲ್ಲಿನ ಬಿಕ್ಕಟ್ಟುಗಳು ಮತ್ತು ಗಂಡಾಂತರಗಳನ್ನು ಬಡವರ ಹಾಗೂ ಮಧ್ಯಮ ವರ್ಗದ ಜನರನ್ನು ಯಾವ ರೀತಿ ತತ್ತರಿಸಿದೆ ಎಂಬುದನ್ನು ವಿಶ್ಲೇಷಿಸಲಾಗಿದೆ. ಸಾಮಾಜಿಕ ಭದ್ರತೆ ಇರುವವರು ಮತ್ತು ಇಲ್ಲದಿರುವವರು ಇದರ ದಾಳಿಯಿಂದ ಯಾವ ರೀತಿ ಪರಿಸ್ಥಿತಿ ಎದುರಿಸಿದ್ದಾರೆ ಭದ್ರತೆಯ ಜೀವನ ಇರುವ ಜನರಿಗೆ

ಜೀವನದ ಬಗೆಗೆ ಆತಂಕವಿಲ್ಲ ಜೀವದ ಬಗ್ಗೆ ಆತಂಕ ಇದೆ. ಆದರೆ ಜೀವನದ ಅಗತ್ಯಗಳೇ ಇಲ್ಲದಿರುವ ಜನರಿಗೆ ಜೀವನ ಹಾಗೂ ಜೀವದ ಎರಡೂ ಆತಂಕ ಉಂಟಾಗಿದೆ. ಜೀವ ಉಳಿಸಿಕೊಳ್ಳಲು ದುಡಿಯಲೇ ಬೇಕು ದುಡಿಮೆಗೆ ಲಾಕ್ಡೌನ್ ಅವಕಾಶ ನೀಡಿಲ್ಲ ಎಲ್ಲ ರೀತಿಯ ಸೌಲಭ್ಯಗಳನ್ನು ಹೊಂದಿದ ಉಳ್ಳವರು ಮತ್ತು ಯಾವುದೇ ಸೌಲಭ್ಯವಿಲ್ಲದೆ ಜೀವನ ನಡೆಸಲು ನಂಬಿದವರ ಸಂಕಟಗಳಿಗೆ ಆಡಳಿತ ಶಾಹಿಗಳು, ರಾಜಕಾರಣಿಗಳು ನಿರ್ಗತಿಕರಿಗೆ ಸರಿಯಾದ ರೀತಿ ಸ್ಪಂದಿಸದ ಸನ್ನಿವೇಶವನ್ನು ಕಾಣಬಹುದು. ಅಭದ್ರತೆಯಲ್ಲಿ ದುಡಿಯುವ ಜನರಿಗೆ ಜೀವ ಒಂದು: ಬಲಿ ತೆಗೆದುಕೊಳ್ಳುವ ಶತ್ರು ಎರಡು, ಒಂದು ಹೊಟ್ಟೆಪಾಡಿಗೆ ಮಾಡುವ ಕೆಲಸ; ಮತ್ತೊಂದು ಕೊರೊನಾ ಎಂಬ ರೋಗ. ಆದರೆ ಹೊಟ್ಟೆ ತುಂಬಿದ ಜನರಿಗೆ ಜೀವ ಒಂದು; ಬಲಿ ತೆಗೆದುಕೊಳ್ಳಬಹುದಾದ ಶತ್ರುವೂ ಒಂದೆ. ಅದು ಕೊರೊನಾ ಮಾತ್ರ, ಬಲಾಢ್ಯರು ತಮ್ಮೆಲ್ಲ ಸಾಮರ್ಥ್ಯದ ಅಸ್ತ್ರಗಳನ್ನು ಹಿಡಿದು ಕೇವಲ ಒಂದು ಶತ್ರುವಿನ ವಿರುದ್ಧ ಮಾತ್ರ ಹೋರಾಡಿದರೆ; ನಿರ್ಗತಿಕರು ಯಾವ ಅಸ್ತ್ರಗಳೂ ಇಲ್ಲದೆ ಏಕಕಾಲಕ್ಕೆ ಎರಡು ಶತ್ರುಗಳ ವಿರುದ್ಧ ಹೋರಾಡಬೇಕಾಗುತ್ತದೆ. ಇದು ಮಾತ್ರ ಆಯ್ಕೆಯೇ ಇಲ್ಲದ ಅತಿರೇಕದ ಆತಂಕ ಸ್ಥಿತಿ. ಜಗತ್ತಿನ ಚರಿತ್ರೆಯಲ್ಲಿ ಯಾವುದೇ ಪ್ರಾಣಾಂತಿಕ ರೋಗ ಅಥವಾ ಸಾಂಕ್ರಾಮಿಕ ರೋಗ ನಿರ್ಗತಿಕರಿಗೆ ಇಂತಹ ಆಯ್ಕೆಯೇ ಇಲ್ಲದ ಆತಂಕದ ಸ್ಥಿತಿಯನ್ನು ನಿರ್ಮಾಣ ಮಾಡುತ್ತಾ ಬಂದಿದೆ. ಸಾಂಕ್ರಾಮಿಕ ಇಲ್ಲವೆ ಪ್ರಾಣಾಂತಿಕ ರೋಗಗಳು ಚರಿತ್ರೆಯ ಯಾವುದಾದರೂ ಒಂದು ಘಟ್ಟದಲ್ಲಿ ಸಂಭವಿಸುತ್ತವೆ. ಇವಕ್ಕೆ ಉಳ್ಳವರೂ ಬಲಿಯಾಗಬಹುದು; ಇಲ್ಲದವರೂ ಬಲಿಯಾಗಬಹುದು. ಇದು ನಿರ್ದಿಷ್ಟವಾಗಿ ಒಂದು ಕಾಲದಲ್ಲಿ ಮಾತ್ರ ಜೀವದ ಬಗೆಗೆ ಭಯ ಮತ್ತು ಆತಂಕಗಳನ್ನು ಹುಟ್ಟಿಸಬಹುದು. ಆದರೆ ಅಸಮಾನತೆ ಹಾಗೂ ಶೋಷಣೆಯ ವ್ಯವಸ್ಥೆಯೇ ಹುಟ್ಟಿಸಿರುವ ಪ್ರಾಣಾಂತಿಕ ರೋಗ ಮಾತ್ರ ಚರಿತ್ರೆಯ ಯಾವುದಾದರೂ ಒಂದು ಘಟ್ಟದಲ್ಲಿ ಸಂಭವಿಸುವುದಿಲ್ಲ. ಇದು ಇವರಿಗೆ ದಿನನಿತ್ಯ ಜೀವದ ಬಗೆಗೆ ಭಯ ಹಾಗೂ ಆತಂಕಗಳನ್ನು ಹುಟ್ಟಿಸುತ್ತಲೇ ಇರುತ್ತದೆ. ಇದನ್ನು ಎದುರಿಸಲು ಎಂತಹ ಗುಂಡಿಗೆ ಬೇಕಾದೀತು? ವ್ಯವಸ್ಥೆಯ ಆಳದ ಈ ಸೂಕ್ಷ್ಮ ವೈರುಧ್ಯಗಳನ್ನು ಕುರಿತು ಆಲೋಚಿಸುವಂತೆ ಕೊರೊನಾ ಕಾಲವು ನಮ್ಮನ್ನು ಒತ್ತಾಯಿಸುತ್ತಿದೆ. ಸಂವಿಧಾನ ನೀಡಿರುವ ಬದುಕುವ ಹಕ್ಕು, ಜೀವನ ನಿರ್ವಹಣೆಯ ಹಕ್ಕು ಮುಂತಾದುವುಗಳನ್ನು ಆಳುವ ಜನರು ಮತ್ತು ಆಡಳಿತ ಯಂತ್ರಾಂಗ ಸಂಪೂರ್ಣವಾಗಿ ಗಾಳಿಗೆ ತೂರಿತೆ ಎಂಬ ಅಸಹಾಯಕತೆಯೂ ಆಕ್ರಂದನವಾಗಿ ಕೇಳಿಬಂತು. ಇಂತಹ ಪರಿಸ್ಥಿತಿಯನ್ನು ಉಪಯೋಗಿಸಿಕೊಂಡು ಆಡಳಿತ ಯಂತ್ರಾಂಗವು ಜನರ ಹಕ್ಕೊತ್ತಾಯಗಳನ್ನು ನಿರ್ಬಂಧ ಮಾಡಿತು ಎಂಬ ಮಾತುಗಳೂ ಬಂದವು. ಅಂದರೆ ಕೊರೊನಾ ಪರಿಸ್ಥಿತಿಯು ಸಂವಿಧಾನದ ಮೂಲಭೂತ ಹಕ್ಕುಗಳನ್ನು ಮತ್ತೊಮ್ಮೆ ನೆನಪು ಮಾಡಿತು

ಇಂದು ಜಾಗತೀಕರಣ ಎನ್ನುವುದು ಬಹುರೂಪಿಯಾಗಿ ನಮ್ಮ ನರತಂತುಗಳನ್ನು ಬಿಡದೆ ಕಾಡುತ್ತಿದೆ. 'ವಸುದೈವ ಕುಟುಂಬಕಂ' ಎನ್ನುವ ಮೂಲಕ ಇಡೀ ಜಗತ್ತು ಒಂದೇ ಎಂದು ನಂಬಿಸಿ ಬಂಡವಾಳಿಗರು ಮತ್ತಷ್ಟು ಬಲಿಷ್ಠರಾಗಿದ್ದಾರೆ ದುಡಿಯುವ ಜನ ಮಾತ್ರ ಜೀವನೋಪಾಯಕ್ಕಾಗಿ ಪರದಾಡುತ್ತಿದ್ದಾರೆ. ಇತ್ತೀಚಿನ ಆರ್ಥಿಕ ಅಂಕಿ ಅಂಶಗಳ ಪ್ರಕಾರ ಪ್ರತಿ 33 ಗಂಟೆಗಳಲ್ಲಿ ಒಬ್ಬ ಬಿಲೆನಿಯರ್ ಆಗುತ್ತಿದ್ದಾನೆ, ಮತ್ತೊಂದೆಡೆ ಅದೇ 33 ಗಂಟೆಗಳಲ್ಲಿ 10 ಲಕ್ಷ ಜನ ಬಡವರಾಗುತ್ತಿದ್ದಾರೆ. ಆದರೆ ದುಡಿಯುವವರು ನರಕದಲ್ಲಿ ನಿಂತು ಸ್ವರ್ಗದ ಕನವರಿಕೆಯಲ್ಲಿದ್ದಾರೆ. ಖಂಡಿತವಾಗಿಯೂ ನಮ್ಮ ನಾಳೆಗಳು ನಮಗೆ ಸಿಗಲೇಬೇಕು ಸಂವಿಧಾನ ಬದ್ಧ ಪ್ರಜಾಸತ್ವ ಉಳಿಯಬೇಕು, ಬಹುತ್ವ ನಮ್ಮ ಉಸಿರಾಗುವ ಹಾಗೆ ಸಮಾಜ ಪುಟಿದೇಳಬೇಕು.

## ಪರಾಮರ್ಶನ ಗ್ರಂಥಗಳು:


1. ಡೊಮಿನಿಕ್ ಡಿ. & ರಾಜು ಬಿ.ಎಲ್. (ಸಂ.), (2017), ದಲಿತ ನೋಟ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.
2. ರಾಜಾರಾಮ್ ತಲ್ಲೂರು, (2022), ಕರಿಡಬ್ಬಿ, ಸಂಕಥನ ಪ್ರಕಾಶನ, ಮಂಡ್ಯ.
3. ಮಣಿ ಎಂ.ಎಸ್., (2022), ಸುಡು ಬಯಲ, ಐ.ಎಚ್.ಎಸ್. ಪ್ರಕಾಶನ, ಬೆಂಗಳೂರು.
4. ಪ್ರಭಾಕರ ಎ.ಎಸ್., (2021), ಚಹರೆಗಳೆಂದರೆ ಗಾಯಗಳು ಹೌದು, ಗೌರಿ ಮೀಡಿಯಾ ಟ್ರಸ್ಟ್ ಪ್ರಕಾಶನ, ಬೆಂಗಳೂರು.
5. ನಾರಾಯಣ ಕೆ.ವಿ., (2018), ನುಡಿಗಳ ಅಳಿವು, ಅಹರ್ನಿಶಿ ಪ್ರಕಾಶನ, ಶಿವಮೊಗ್ಗ.
6. ನಾರಾಯಣ ಕೆ.ವಿ., (2018), ಕನ್ನಡ ಜಗತ್ತು ಅರ್ಧ ಶತಮಾನ, ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
7. ಚಲಪತಿ ಆರ್., (2020), ಕಲಿಕೆಯಲ್ಲಿ ಕನ್ನಡ ಬಳಕೆಯ ಬಿಕ್ಕಟ್ಟುಗಳು, ಗಗನ ಪ್ರಕಾಶನ, ಮೈಸೂರು.



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4.0 International License.